
ಎಲ್ಲವೂ ಅವಳನ್ನು ಉರಿಸುತ್ತಿದ್ದವು. ಬಿಕ್ಕಿಬಿಕ್ಕಿ ಅಳುತ್ತಲೇ ಕಳೆದ ರಾತ್ರಿಯ ನಡುವಲ್ಲಿ ಎದ್ದು ಅವನು ತಂದುಕೊಟ್ಟ ಎಲ್ಲಾ ಪುಸ್ತಕಗಳನ್ನು ಸುಟ್ಟಳು, ಅವನ ಉಡುಗೊರೆಗಳನ್ನು ಸುಟ್ಟಳು, ನಿರೀಕ್ಷಿಸಿಯೇ ಇರದ ಜಾಗಗಳಲ್ಲಿ ಅವನು ಬಿಟ್ಟುಹೋಗುತ್ತಿದ್ದ ಸಣ್ಣ ಸಣ್ಣ ಕವಿತೆಯ ಸಾಲುಗಳನ್ನು ಸುಟ್ಟಳು. ಕಣಕಣದಲ್ಲೂ ಅವನ ಸ್ಪರ್ಶದ ನೆನಪು ಹಚ್ಚೆಯಾಗಿದ್ದ ತನ್ನ ಮೈಯನ್ನೂ ಸುಟ್ಟುಕೊಳ್ಳಬೇಕು ಅನ್ನಿಸಿ, ಕಡೆಗೆ ಹೋಗಿ ಅದೆಲ್ಲವನ್ನೂ ತೊಳೆಯುವಂತೆ ಗಂಟೆಗಟ್ಟಲೆ ಶವರ್ ಅಡಿ ನಿಂತಳು.



ಬೆಳಗಾಗುವಷ್ಟರಲ್ಲಿ ಅವಳ ಮನಸ್ಸೂ ಬೂದಿಯಾಗಿತ್ತು. ಆಫೀಸಿಗೆ ಹೋಗಿ ರಾಜೀನಾಮೆ ಕೊಟ್ಟು, ಮನೆ ಖಾಲಿ ಮಾಡಿ ಊರಿಗೆ ಹೋದಳು. ದಾರಿಯಲ್ಲಿ ಸಿಕ್ಕ ಕಾವೇರಿ ನದಿಯಲ್ಲಿ ಮೊಬೈಲ್ ಸಿಮ್ ಕಾರ್ಡ್ ತೆಗೆದು ಎಸೆದಳು. ತನ್ನ ಬದುಕಿನಲ್ಲಿ ಅರವಿಂದನ ನೆನಪು ಉಳಿಸುವ ಎಲ್ಲವನ್ನೂ, ಎಲ್ಲರನ್ನೂ ಒರೆಸಿಹಾಕಿದ್ದಳು. ಊರಿನಲ್ಲಿ ಮೂರು ತಿಂಗಳು ಇದ್ದು ಬಂದ ಅನಂತರ ಬದುಕನ್ನು ಹೊಸತಾಗಿ ಪ್ರಾರಂಭಿಸಿದ್ದಳು. ಯಾರನ್ನೂ ಹತ್ತಿರವಾಗಿಸಿಕೊಳ್ಳುತ್ತಿರಲಿಲ್ಲ. ಹಾಗೆ ಐದು ವರ್ಷಗಳನ್ನು ಕಳೆದಿದ್ದಳು. ಆದರೆ, ಹೊಸತಾಗಿ ಜೊತೆಯಾದ ಈ ಸ್ನೇಹಿತೆಯರು ಅಷ್ಟು ಸುಲಭವಾಗಿ ತಮ್ಮ ವೈಯಕ್ತಿಕ ವಿಷಯಗಳನ್ನು ಹಂಚಿಕೊಳ್ಳುವುದು, ಹಂಚಿಕೊಳ್ಳುವಷ್ಟರ ಮಟ್ಟಿಗೆ ಎಲ್ಲರನ್ನೂ ಹಚ್ಚಿಕೊಳ್ಳುವುದು ಅವಳಿಗೆ ಕಸಿವಿಸಿ ತರುತ್ತಿತ್ತು. ಸದ್ಯ ಬಾಟಲಿ ನನ್ನ ಕಡೆ ತಿರುಗದಿರಲಿ ಎಂದು ಕೇಳಿಕೊಳ್ಳುತ್ತಲೇ ಇದ್ದಳು. ವಿಭಾವರಿ ತಿರುಗಿಸಿದ ಬಾಟಲಿ ಗಿರಗಿರನೆ ಸುತ್ತಿ ಮಧುವಂತಿಯ ಕಡೆಗೆ ಮುಖ ಮಾಡಿ ನಿಂತಿತು. 'ಓಹ್ಹೋ' ಎಂದು ಮಧುವಂತಿ ಉದ್ಗರಿಸಿ, 'ಟ್ರೂಥ್' ಎಂದು ಕೂಗಿದಳು. ಇನ್ಯಾರಾದರೂ ಏನಾದರೂ ಹೇಳುವ ಮೊದಲೇ ಸಾವನಿ ತಲೆ ಎತ್ತಿ, ನೇರವಾಗಿ ಕೂತು, 'ನಿನ್ನ ಬದುಕಿನಲ್ಲೇ ಅತ್ಯಂತ ನೋವಿನ ದಿನ ಯಾವುದು?' ಎಂದು ಕೇಳೇಬಿಟ್ಟಳು. ಎಲ್ಲರೂ ಮಧುವಂತಿಯ ಕಡೆ ತಿರುಗಿದರು. ಅದುವರೆಗೂ ನಗುನಗುತ್ತಿದ್ದ ಮಧುವಂತಿ ಸ್ವಲ್ಪ ಮಂಕಾದಳು. ವೈನ್ ಗ್ಲಾಸ್ ಕೈಗೆತ್ತಿಕೊಂಡು ಎರಡು ಮೂರು ಗುಟುಕು ಗುಟುಕರಿಸಿದಳು. ಆಗತಾನೆ ಶುರುವಾಗಿದ್ದ ಮಳೆಯನ್ನು ದಿಟ್ಟಿಸುತ್ತಾ, 'ನನ್ನ ಗಂಡನಿಗೆ ಅಫೇರ್ ಇದ್ದದ್ದು ಗೊತ್ತಾದ ದಿನ' ಎಂದಾಗ ಸಾವನಿ ಅವಾಕ್ಕಾಗಿದ್ದಳು, ಕಲ್ಯಾಣಿ ತಟ್ಟನೆ ತಲೆ ಎತ್ತಿದ್ದಳು. ಇಷ್ಟು ಸುಂದರವಾದ ಹೆಂಡತಿ ಇದ್ದೂ ಇನ್ನೊಂದು ಅಫೇರ್ ಯಾಕೆ ಬೇಕಾಯ್ತು ಎಂದು ಸಾವನಿ ಯೋಚಿಸುತ್ತಿದ್ದಳು. ಮಧುವಂತಿ ಮುಂದುವರಿಸಿದಳು, 'ಅದು ನನ್ನ ಅತ್ಯಂತ ನೋವಿನ, ಅವಮಾನದ ದಿನ. ನನ್ನ ಅಷ್ಟು ವರ್ಷಗಳ ಪ್ರೇಮ, ನಂಬಿಕೆ, ಆತ್ಮವಿಶ್ವಾಸ ಎಲ್ಲವೂ ಪುಡಿಪುಡಿಯಾದ ದಿನ. ಮೊದಲು ಅನ್ನಿಸಿದ್ದು, ನನ್ನಲ್ಲಿ ಏನು ಕೊರತೆ ಇತ್ತು? ಅದು ಹೆಣ್ಣಾಗಿ ನನ್ನ ಸಾವು ಅನ್ನಿಸಿತ್ತು. ಬಹುಶಃ ನನಗೂ ಸ್ವಲ್ಪ ಅಹಂ ಇತ್ತೇನೋ, ಅದು ಅಂದು ಹುಡಿಹುಡಿಯಾಗಿ ಹೋಯಿತು. ಘಟ್ಟಿಸಿ ಕೇಳಿದಾಗ ನನ್ನ ಮುಖ ನೋಡಿಕೊಂಡು ಸುಳ್ಳು ಹೇಳುವುದು ಅವನಿಗಾಗಲಿಲ್ಲ. ನನಗೆ ಅದನ್ನು ಒಪ್ಪಿಕೊಳ್ಳಲೇ ಆಗಲಿಲ್ಲ, ದೇವರೇ ಅವನು ಸುಳ್ಳಾದರೂ ಆಡಬಾರದಿತ್ತೆ ಎಂದು ಕನಲಿದ್ದೆ. ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಅತ್ತೆ, ಚೀರಿದೆ, ಮತ್ತೆ ಅತ್ತೆ. ನನ್ನ ಗಂಡನ ಮುಖ ನೋಡಲೂ ಅಸಹ್ಯವಾಗಿತ್ತು. ಕನ್ನಡಿಯಲ್ಲಿ ನನ್ನ ಮುಖ ನೋಡಿಕೊಳ್ಳಲೂ ಅವಮಾನವಾಗುತ್ತಿತ್ತು' ಮಧುವಂತಿಯ ಧ್ವನಿಯಲ್ಲಿ ಎಂದೂ ಕಾಣದ ಸೋಲು. ಕಲ್ಯಾಣಿ ಅವಳ ಮುಖವನ್ನೇ ದಿಟ್ಟಿಸುತ್ತಿದ್ದಳು. 'ಬಿಟ್ಟುಬಿಡಲೆ, ಎಲ್ಲರಿಗೂ ಹೇಳಿ ಮರ್ಯಾದೆ ತೆಗೆಯಲೆ, ಅವಳು ಯಾರೆಂದು ಕೇಳಿ ಹೋಗಿ ಜಗಳವಾಡಲೆ... ಇಡೀ ರಾತ್ರಿ ಯೋಚಿಸುತ್ತಲೇ ಇದ್ದೆ...' ಮೆಲುದನಿಯಲ್ಲಿ ಮಧುವಂತಿ ಮಾತನಾಡುತ್ತಿದ್ದರೆ ಸಾವನಿ ವಿವರ್ಣಳಾಗಿದ್ದಳು, ಪಕ್ಕಕ್ಕೆ ಜರುಗಿ ಮಧುವಂತಿಯನ್ನು ಅಪ್ಪಿಕೊಂಡಳು. ಕಲ್ಯಾಣಿಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು, ಎದೆಯಲ್ಲಿ ಏನೋ ಕಟ್ಟಿಕೊಂಡಂತಾಗಿತ್ತು. ಈ ಕ್ಷಣದವರೆಗೂ ಅವಳಿಗೆ ತನ್ನಿಂದ ಇನ್ಯಾರೋ ಇಂತಹ ನೋವು ಅನುಭವಿಸಿರಬಹುದು ಎನ್ನುವ ಅಂದಾಜೇ ಇರಲಿಲ್ಲ. ತಾನು ಸೋತವಳು, ಹೆಂಡತಿ ಗೆದ್ದಳು ಎಂದುಕೊಂಡಿದ್ದಳು. ಆದರೆ,